**ನಗರಾಭಿವೃದ್ಧಿ ಮಂತ್ರಾಲಯ**

**ಅಧಿಸೂಚನೆ**

**ನವದೆಹಲಿ, 25 ನೇ ಮೇ 2011**

**ಸಾ.ಕಾ.ನಿ. 401(ಇ)** ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002 ರ 60) ರ ಪ್ರಕರಣ 56 ರ ಉಪ-ಪ್ರಕರಣ (2) ಖಂಡ (1) ರ ಮೇರೆಗೆ ಪದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕೇಂದ್ರ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸಿದೆ, ಎಂದರೆ;

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:** (1) ಈ ನಿಯಮವನ್ನು ಬೆಂಗಳೂರು ಮೆಟ್ರೋ ರೈಲ್ವೆ ಕ್ಲೇಮು ಆಯುಕ್ತರ ದುರ್ವರ್ತನೆ ಅಥವಾ ಅಸಮರ್ಥತೆ, ಬಗೆಗಿನ ತನಿಖೆಗಳ ಪ್ರಕ್ರಿಯೆ ನಿಯಮಗಳು, 2011 ಎಂದು ಕರೆಯತಕ್ಕದ್ದು.

   (2) ಇದು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

   (ಎ) "ಅಧಿನಿಯಮ" ಎಂದರೆ, ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002 ರ 60);

   (ಬಿ) "ಕ್ಲೇಮುಗಳ ಆಯುಕ್ತರು" ಎಂದರೆ ಅಧಿನಿಯಮದ 48 ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕ್ಲೇಮುಗಳ ಆಯುಕ್ತರು.

   (ಸಿ) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ

   (ಡಿ) "ನ್ಯಾಯಾಧೀಶ" ಎಂದರೆ ನಿಯಮ 3, ಉಪ ನಿಯಮ (3)ರ ಮೇರೆಗೆ ವಿಚಾರಣೆ ನಡೆಸಲು ನೇಮಕಗೊಂಡ ಸರ್ವೋಚ್ಚ ನ್ಯಾಯಾಲಯದ ಹಾಲಿ ಅಥವಾ ನಿವೃತ್ತ ನ್ಯಾಯಾಧೀಶ

(2) ಈ ನಿಯಮಗಳಲ್ಲಿ ಉಪಯೋಗಿಸಿದ ಮತ್ತು ವ್ಯಕ್ತಪಡಿಸಿದ ಪದಗಳನ್ನು ಪರಿಭಾಷಿಸದಿದ್ದರೆ, ಆದರೆ ಅವುಗಳನ್ನು ಮೆಟ್ರೋ ರೈಲ್ವೆ (ಪ್ರವರ್ತನೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002 ರ 60) ರಲ್ಲಿ ಪರಿಭಾಷಿಸಿದ್ದರೆ, ಅದರಲ್ಲಿ ಅವುಗಳಿಗೆ ನೀಡಿರುವ ಅರ್ಥವನ್ನೇ ಈ ಅಧಿನಿಯಮದಲ್ಲೂ ಅರ್ಥೈಸತಕ್ಕದ್ದು.

3. **ದೂರುಗಳನ್ನು ವಿಚಾರಣೆಗೊಳಪಡಿಸಲು ಸಮಿತಿ:** (1) ಕೇಂದ್ರ ಸರ್ಕಾರವು, ನಿರ್ದಿಷ್ಟ ದುರ್ವರ್ತನೆಗಳ ದೋಷಾರೋಪಣ ಪಟ್ಟಿ, ಅಥವಾ ಕ್ಲೇಮುಗಳ ಆಯುಕ್ತರವರ ಕಚೇರಿಯು ಕರ್ತವ್ಯಗಳನ್ನು ನಿರ್ವಹಿಸುವ

ಸಂಬಂಧದಲ್ಲಿ ಅಸಮರ್ಥತೆ ಕುರಿತು ನಿರ್ದಿಷ್ಟವದಾ ದೂರುಗಳನ್ನು ಸ್ವೀಕರಿಸಿದಲ್ಲಿ, ಸದರಿ ದೂರುಗಳ ಪ್ರಾಥಮಿಕ ಪರಿಶೀಲನೆ ಮಾಡತಕ್ಕದ್ದು.

(2) ಪ್ರಾಥಮಿಕ ಪರಿಶೀಲನೆಯಲ್ಲಿ ಕೇಂದ್ರ ಸರ್ಕಾರಕ್ಕೆ ಆಪಾದನೆಗಳನ್ನು ತನಿಖೆಗೊಳಪಡಿಸುವುದು ಅವಶ್ಯವೆಂದು ಕಂಡುಬಂದಲ್ಲಿ, ದೂರು ಮತ್ತು ಅದಕ್ಕೆ ಪೂರಕವಾದ ಸಾಮಗ್ರಿಗಳಿದ್ದರೆ, ಅವುಗಳೊಂದಿಗೆ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ಸಮಿತಿಯ ಮುಂದೆ ಆರೋಪಗಳ ದೋಷಾರೋಪಣೆ ಬಗ್ಗೆ ತನಿಖೆ ನಡೆಸಲು ಸಲ್ಲಿಸತಕ್ಕದ್ದು. ಸಮಿತಿಯು ಮುಂದಿನವರುಗಳನ್ನು ಒಳಗೊಂಡಿರುತಕ್ಕದ್ದು. ಅವರುಗಳೆಂದರೆ:-

(1) ಕಾರ್ಯದರ್ಶಿ (ಸಮನ್ವಯ ಮತ್ತು ಸಾರ್ವಜನಿಕ ಕುಂದುಕೊರತೆ) ಸಂಪುಟ ಸಚಿವ -ಅಧ್ಯಕ್ಷ

(2) ಕಾರ್ಯದರ್ಶಿ, ನಗರಾಭಿವೃದ್ಧಿ ಮಂತ್ರಾಲಯ - ಸದಸ್ಯ

(3) ಕಾರ್ಯದರ್ಶಿ, (ಕಾನೂನು ವ್ಯವಹಾರಗಳು, ಕಾನೂನು ಮತ್ತು ನ್ಯಾಯ ಇಲಾಖೆ) ಸದಸ್ಯ

(3) ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು, ತನಿಖೆ ನಡೆಸುವ ಸಲುವಾಗಿ, ಸಮಿತಿಯು ಈ ನಿಯಮಗಳಿಗನುಸಾರವಾಗಿ ದೂರು ನೀಡಿದವರ ಸಾಕ್ಷಿಗಳನ್ನು ದಾಖಲಿಸುವುದು ಮತ್ತು ದೂರಿಗೆ ಪೂರಕವಾದ ಸಾಮಗ್ರಿಗಳನ್ನು ಸಂಗ್ರಹಿಸುವುದು ಮೊದಲಾದವುಗಳನ್ನೊಗೊಂಡ ತನ್ನದೇ ಆದ ಪ್ರಕ್ರಿಯೆ ಮತ್ತು ತನಿಖಾ ವಿಧಾನವನ್ನು ರೂಪಿಸಿಕೊಳ್ಳತಕ್ಕದ್ದು.

(4) ಸಮಿತಿಯು ತನ್ನ ನಿರ್ಣಯವನ್ನು ಕೇಂದ್ರ ಸರ್ಕಾರಕ್ಕೆ ಆದಷ್ಟು ಶೀಘ್ರವಾಗಿ ಕೇಂದ್ರ ಸರ್ಕಾರವು ಈ ಸಂಬಂಧವಾಗಿ ನಿಗದಿಪಡಿಸಿದ ಸಮಯದೊಳಗೆ ಸಲ್ಲಿಸತಕ್ಕದ್ದು.

4. **ವಿಚಾರಣೆ ನಡೆಸಲು ನ್ಯಾಯಾಧೀಶರು:** (1) ಕೇಂದ್ರ ಸರ್ಕಾರವು ದುರ್ವರ್ತನೆ ಅಥವಾ ಕ್ಲೇಮುಗಳ ಆಯುಕ್ತರ ಅಸಮರ್ಥತೆಗಳ ಆರೋಪಗಳ ಬಗ್ಗೆ ನಿಜಾಂಶವನ್ನು ತಿಳಿಯಲು ವಿಚಾರಣೆ ನಡೆಸಬೇಕೆಂಬುಕ್ಕೆ ಯುಕ್ತ ಆಧಾರಗಳಿವೆ ಎಂದು ಅಭಿಪ್ರಾಯಪಟ್ಟಲ್ಲಿ, ಅದು ಸದರಿಯನ್ನು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಿಗೆ ಉಲ್ಲೇಖಿಸುತ್ತಾ, ಸರ್ವೋಚ್ಚ ನ್ಯಾಯಾಲಯದ ಒಬ್ಬ ನ್ಯಾಯಮೂರ್ತಿಗಳನ್ನು ವಿಚಾರಣೆ ನಡೆಸಲು ನಾಮನಿರ್ದೇಶನ ಮಾಡಲು ಕೋರತಕ್ಕದ್ದು.

(2) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಿಂದ ನಾಮನಿರ್ದೇಶನಗೊಂಡ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳನ್ನು (ಇನ್ನು ಮುಂದೆ ನ್ಯಾಯಾಧೀಶ ಎಂದು ಉಲ್ಲೇಖಿಸುವ) ವಿಚಾರಣೆ ನಡೆಸಲು ಆದೇಶದ ಮೇರೆಗೆ ಕೇಂದ್ರ ಸರ್ಕಾರವು ನೇಮಿಸತಕ್ಕದ್ದು.

(3) ನ್ಯಾಯಾಧೀಶರು ನೇಮಕಗೊಂಡ ತಿಳುವಳಿಕೆಯನ್ನು ಉಪ-ನಿಯಮ (2)ರ ಅನುಸಾರ ಕ್ಲೇಮುಗಳ ಆಯುಕ್ತರಿಗೆ ನೀಡತಕ್ಕದ್ದು.

(4) ಕೇಂದ್ರ ಸರ್ಕಾರವು ನ್ಯಾಯಾಧೀಶರಿಗೆ ಈ ಮುಂದಿನವುಗಳ ಪ್ರತಿಗಳನ್ನು ಒದಗಿಸತಕ್ಕದ್ದು. ಅವುಗಳೆಂದರೆ:-

(ಎ) ಸಂಬಂಧಪಟ್ಟ ಕ್ಲೇಮುಗಳ ಆಯುಕ್ತರ ವಿರುದ್ಧ ಮಾಡಲಾದ ದೋಷಾರೋಪಣ ಪಟ್ಟಿ ಹಾಗೂ ಆರೋಪಣಾ ಹೇಳಿಕೆ;

(ಬಿ) ಸಾಕ್ಷಿಯ ಹೇಳಿಕೆ, ಏನಾದರೂ ಇದ್ದರೆ, ಮತ್ತು

(ಸಿ) ವಿಚಾರಣೆಗೆ ಪೂರಕವಾದ ದಸ್ತಾವೇಜು ಸಾಮಗ್ರಿಗಳು.

(5) ನ್ಯಾಯಾಧೀಶರು ವಿಚಾರಣೆಯನ್ನು ಕೇಂದ್ರ ಸರ್ಕಾರವು ನಿಗದಿಗೊಳಿಸಿದ ಅವಧಿಯಲ್ಲಿ ಅಥವಾ ಅವಧಿಯನ್ನು ಮುಂದುವರೆಸಿದಲ್ಲಿ, ಸದರಿ ಅವಧಿಯೊಳಗೆ ವಿಚಾರಣೆಯನ್ನು ಪೂರ್ಣಗೊಳಿಸತಕ್ಕದ್ದು.

(6) ನ್ಯಾಯಾಧೀಶರು ಸಂಬಂಧಪಟ್ಟ ಕ್ಲೇಮುಗಳ ಆಯುಕ್ತರಿಗೆ ಪ್ರತಿರಕ್ಷೆಗಾಗಿ ಲಿಖಿತ ವಾದ ಸಲ್ಲಿಸಲು ಸೂಕ್ತ ಅವಕಾಶವನ್ನು, ಈ ಸಂಬಂಧದಲ್ಲಿ ನಿಗದಿಪಡಿಸುವ ಕಾಲವಧಿ ನೀಡತಕ್ಕದ್ದು.

(7) ಕ್ಲೇಮುಗಳ ಆಯುಕ್ತರುಗಳು ಯಾವುದೇ ರೀತಿಯ ದೈಹಿಕ ಹಾಗೂ ಮಾನಸಿಕ ಅಸಮರ್ಥತೆಯ ಕಾರಣದಿಂದಾಗಿ ತಮ್ಮ ಕಚೇರಿ ಕರ್ತವ್ಯಗಳನ್ನು ದಕ್ಷವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ಆರೋಪಿಸಿದ್ದರೆ, ಹಾಗೂ ಆ ಆರೋಪಗಳನ್ನು ನಿರಾಕರಿಸಿದರೆ, ನ್ಯಾಯಾಧೀಶರು ಸದರಿ ಕ್ಲೇಮು ಆಯುಕ್ತರಿಗೆ ವೈದ್ಯಕೀಯ ಪರೀಕ್ಷೆಗೊಳಪಡಲು ಏರ್ಪಾಡು ಮಾಡಬಹುದು ಹಾಗೂ ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದಿಂದ ನೇಮಕಗೊಂಡ ವೈದ್ಯಕೀಯ ಮಂಡಳಿಯ ಮುಂದೆ ಕ್ಲೇಮುಗಳ ಆಯುಕ್ತರು, ನ್ಯಾಯಾಧೀಶರು ಈ ಸಂಬಂಧದಲ್ಲಿ ನಿಗದಿಪಡಿಸುವ ಕಾಲಾವಧಿಯೊಳಗೆ ವೈದ್ಯಕೀಯ ಪರೀಕ್ಷೆಗೆ ತನ್ನನ್ನು ಒಪ್ಪಿಸಿಕೊಳ್ಳತಕ್ಕದ್ದು.

(8) ವೈದ್ಯಕೀಯ ಮಂಡಳಿಯು ಕ್ಲೇಮುಗಳ ಆಯುಕ್ತರ ಸಂಬಂಧದಲ್ಲಿ ಅವಶ್ಯಕವೆಂದು ಕಂಡುಬರುವ ವೈದ್ಯಕೀಯ ಪರೀಕ್ಷೆಗಳನ್ನು ಕೈಗೊಳ್ಳತಕ್ಕದ್ದು ಮತ್ತು ಕ್ಲೇಮು ಆಯುಕ್ತರು ಅಸಮರ್ಥರೆ ಹಾಗೂ ಅವರಲ್ಲಿ ಸಮರ್ಥರೆ ಕಚೇರಿಯಲ್ಲಿ ಮುಂದುವರೆಯುವಲ್ಲಿ ಅನರ್ಹತೆಯೇ ಎಂಬುದವರ ಬಗ್ಗೆ ನ್ಯಾಯಾಧೀಶರಿಗೆ ವರದಿಯನ್ನು ಸಲ್ಲಿಸತಕ್ಕದ್ದು.

(9) ವೈದ್ಯಕೀಯ ಮಂಡಳಿಯು ಅವಶ್ಯಕವೆಂದು ಪರಿಗಣಿಸುವಂತಹ ವೈದ್ಯಕೀಯ ಪರೀಕ್ಷೆಗೊಳಪಡಲು ಕ್ಲೇಮುಗಳ ಆಯುಕ್ತರು ನಿರಾಕರಿಸಿದರೆ, ಮಂಡಳಿಯು ಕ್ಲೇಮುಗಳ ಆಯುಕ್ತರು ಯಾವ ವೈದ್ಯಕೀಯ ಪರೀಕ್ಷೆಗೊಳಪಡಲು ನಿರಾಕಸಿದರೋ ಅಂತಹವುಗಳ ವರದಿಯನ್ನು ನ್ಯಾಯಾಧೀಶರಿಗೆ ಸಲ್ಲಿಸತಕ್ಕದ್ದು. ಸದರಿ ವರದಿಯನ್ನು ಸ್ವೀಕರಿಸಿದ ನಂತರ ನ್ಯಾಯಾಧೀಶರು ಕ್ಲೇಮುಗಳ ಆಯುಕ್ತರ ಮೇಲೆ ದೂರಿನಲ್ಲಿ ಆರೋಪಿಸಲಾದ ದೈಹಿಕ ಅಥವಾ ಮಾನಸಿಕ ಅಸಮರ್ಥತೆಯನ್ನು ಹೊಂದಿರುವನೆಂದು ಪೂರ್ವಭಾವನೆ ಹೊಂದತಕ್ಕದ್ದು.

(10) ನ್ಯಾಯಾಧೀಶರು ಕ್ಲೇಮುಗಳ ಆಯುಕ್ತರ ಲಿಖಿತ ಹೇಳಿಕೆ ಹಾಗೂ ವೈದ್ಯಕೀಯ ವರದಿ ಏನೂದರೂ ಇದ್ದರೆ, ಪರಿಶೀಲಿಸಿದ ನಂತರ ಉಪ-ಪ್ರಕರಣ (4) ಖಂಡ (ಎ) ರಡಿ ದೋಷಾರೋಪಣೆಗಳನ್ನು ತಿದ್ದುಪಡಿಗೊಳಪಡಿಸಬಹುದು ಮತ್ತು ಅಂತಹ ಪ್ರಕರಣಗಳಲ್ಲಿ ಕ್ಲೇಮು ಆಯುಕ್ತರು ಪ್ರತಿರಕ್ಷೆಗಾಗಿ ಹೊಸದಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(11) ಕೇಂದ್ರ ಸರ್ಕಾರವು ಅದರ ಸರ್ಕಾರದ ಒಬ್ಬ ಅಧಿಕಾರಿಯನ್ನು ಅಥವಾ ಯಾವುದೇ ವಕೀಲರನ್ನು ಕ್ಲೇಮುಗಳ ಆಯುಕ್ತರಿಗೆ ಎದುರಾಗಿ ದಾವೆ ಮಂಡಿಸಲು ನೇಮಿಸತಕ್ಕದ್ದು.

(12) ಕೇಂದ್ರ ಸರ್ಕಾರವು ನ್ಯಾಯಾಧೀಶರ ಮುಂದೆ ತನ್ನ ದಾವೆಯನ್ನು ಮಂಡಿಸಲು ವಕೀಲರನ್ನು ನೇಮಿಸಿಕೊಂಡಾಗ, ಅದು ಕ್ಲೇಮುಗಳ ಆಯುಕ್ತರನ್ನೂ ಸಹ ಅವರು ಆಯ್ಕೆ ಮಾಡಿಕೊಂಡ ವಕೀಲರ ಮೂಲಕ ವಾದ ಮಂಡಿಸಲು ಅನುಮತಿಸತಕ್ಕದ್ದು.

5. **ವಿಚಾರಣಾ ವರದಿ:** ವಿಚಾರಣೆಯು ಮುಕ್ತಾಯಗೊಂಡ ನಂತರ, ನ್ಯಾಯಾಧೀಶರು ಕೇಂದ್ರ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿ, ಅದರಲ್ಲಿ ಆರೋಪ ಪಟ್ಟಿಯಲ್ಲಿನ ಪ್ರತಿಯೊಂದು ದೋಷಾರೋಪಣೆ ಕುರಿತಂತೆ ತನ್ನ ನಿರ್ಣಯ ಹಾಗೂ ಅದಕ್ಕೆ ಸೂಕ್ತವೆನಿಸುವ ಅಭಿಪ್ರಾಯೋಕ್ತಿಯನ್ನು ಸಲ್ಲಿಸಬೇಕು.

6. **ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳಿಗೆ ಬದ್ಧವಾಗಬೇಕಿಲ್ಲ:-** ನಿಯಮ 4 ರ ಮೇರೆಗೆ ವಿಚಾರಣೆ ನಡೆಸುವ ಸಂದರ್ಭದಲ್ಲಿ ನ್ಯಾಯಾಧೀಶರು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ಇದರಲ್ಲಿನ ಪ್ರಕ್ರಿಯೆಗಳಿಗೆ ಬದ್ಧವಾಗಬೇಕಿಲ್ಲ, ಆದರೆ ಸ್ವಧರ್ಮ ಮತ್ತು ಸ್ವಾಭಾವಿಕ ನ್ಯಾಯ ತತ್ವದ ಮಾರ್ಗದರ್ಶನಗಳನ್ನು ಅನುಸರಿಸತಕ್ಕದ್ದು ಹಾಗೂ ಸ್ಥಳ ಹಾಗೂ ಸಮಯಗಳನ್ನು ನಿಗಧಿಪಡಿಸುವುದನ್ನೊಳಗೊಂಡಂತೆ ತನ್ನದೇ ಆದ ಪ್ರಕ್ರಿಯೆಯನ್ನು ರೂಪಿಸಿಕೊಳ್ಳುವ ಸಾಮರ್ಥ್ಯವಿರತಕ್ಕದ್ದು.

7. **ಕ್ಲೇಮುಗಳ** ಆಯುಕ್ತರ **ಅಮಾನತು:** ನಿಯಮ 4 ರಲ್ಲಿ ಏನೇ ಇದ್ದರೂ, ಹಾಗೂ ಸದರಿ ನಿಯಮಾನುಸಾರ ಪ್ರತಿಕೂಲವಾಗದಂತೆ ಯಾವುದೇ ಕ್ರಮ ಕೈಗೊಂಡು, ಕೇಂದ್ರ ಸರ್ಕಾರವು ಆರೋಪಗಳ ಗಂಭೀರತೆಯನ್ನು ಗಮನದಲ್ಲಿರಿಸಿಕೊಂಡು, ಯಾವ ದೂರಿನ ಮೇಲೆ ತನಿಖೆ ಅಥವಾ ವಿಚಾರಣೆ ನಡೆಸಲಾಗುತ್ತಿದೆಯೋ ಅಂತಹ ಕ್ಲೇಮುಗಳ ಆಯುಕ್ತರವರನ್ನು ಅಮಾನತ್ತಿನಲ್ಲಿಡಬಹುದು.

8. **ಜೀವನ ನಿರ್ವಹಣಾ ಭತ್ಯೆ:** ಆ ಸಮಯದಲ್ಲಿ ಕೇಂದ್ರ ಸರ್ಕಾರದಲ್ಲಿ ಸದರಿ ಹುದ್ದೆಗೆ ಸಮಾಂತರವಾದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗೆ ಪಾವತಿಸುತ್ತಿರುವುದಕ್ಕೆ ಯಾವ ನಿಯಮ ಮತ್ತು ಆದೇಶಗಳು ಅನ್ವಯವಾಗುತ್ತವೋ, ಅವುಗಳಿಗನುಸಾರವಾಗಿ ಅಮಾನತ್ತಿನಲ್ಲಿರುವ ಕ್ಲೇಮುಗಳ ಆಯುಕ್ತರಿಗೆ ಜೀವನಭತ್ಯೆಗಳನ್ನು ಪಾವತಿಸತಕ್ಕದ್ದು.

(ಎಫ್. ಸಂಖ್ಯೆ. ಕೆ-14011/45/2010-ಮೆಟ್ರೋ)

ಎಸ್.ಕೆ. ಲೋಹಿಯಾ, ಓಎಸ್‌ಡಿ (ನಗರ ಸಾರಿಗೆ) ಮತ್ತು ಕಾ.ಅ. ಜಂಟಿ ಕಾರ್ಯದರ್ಶಿ